6. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ : ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರವು ಸೇರಿದಂತೆ ರಾಜ್ಯಾದ್ಯಂತ ಇರುವ ಮೇಲು ಸಕ್ಕರೆ ಶೆಟ್ಟರ್ (ಉಪ್ಪಾರ) ಜನಾಂಗವು ತೀವ್ರವಾಗಿ ಹಿಂದುಳಿದಿದ್ದು, ಅವರ ಅಭಿವೃದ್ಧಿಗೆ ಸರ್ಕಾರ ವಿಶೇಷ ಯೋಜನೆ ಜಾರಿ ಮಾಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರವು ಸೇರಿದಂತೆ ರಾಜ್ಯಾದ್ಯಂತ ಇರುವ ಮೇಲು ಸಕ್ಕರೆ ಶೆಟ್ಟರ್ (ಉಪ್ಪಾರ) ಜನಾಂಗವು ತೀವ್ರವಾಗಿ ಹಿಂದುಳಿದಿದ್ದು, ಅವರ ಅಭಿವೃದ್ಧಿಗೆ ಸರ್ಕಾರ ವಿಶೇಷ ಯೋಜನೆ ಜಾರಿ ಮಾಡುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಗಮನವನ್ನು ಸೆಳೆಯುತ್ತಿದ್ದೇನೆ. ಆದರೆ ನನಗೆ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ ನಾನು ಈಗ ಉತ್ತರ ಹೇಳುತ್ತಿದ್ದೇನೆ.

ಸರ್ಕಾರದ ಆದೇಶ ಸಂಖ್ಯೆ : ಸಕಇ 225 ಬಿಸಿಎ 2000, ದಿನಾಂಕ 30.03.2002 ರಲ್ಲಿ ಹೊರಡಿಸಿರುವ ಜಾತಿಗಳ ಪಟ್ಟಿಯಲ್ಲಿ ಪ್ರವರ್ಗ 1 ರಲ್ಲಿ ಅತೀ ಹಿಂದುಳಿದ 95 ಜಾತಿಗಳು ಹಾಗೂ 288 ಉಪಜಾತಿಗಳು ಇರುತ್ತವೆ. ಉಪ್ಪಾರ ಜಾತಿಯನ್ನು ಅತೀ ಹಿಂದುಳಿದ ವರ್ಗ 1 ರಲ್ಲಿನ ಕ್ರಮ ಸಂಖ್ಯೆ: 53 (ಎ)ರಲ್ಲಿ ಹಾಗೂ ಮೇಲು ಸಕ್ಕರೆ ಉಪಜಾತಿಯನ್ನು 53 (ಐ) ರಲ್ಲಿ ಸೇರಿಸಲಾಗಿದೆ. ಪ್ರವರ್ಗ 1 ರಲ್ಲಿನ ಜಾತಿಗಳ ಜನಾಂಗದವರಿಗೆ ಯಾವುದೇ ಆದಾಯ ಮಿತಿ ಇಲ್ಲದಂತೆ ಶೈಕ್ಷಣಿಕ ಪ್ರವೇಶದಲ್ಲಿ ಶೇಕಡ 4 ರಷ್ಟು ಹಾಗೂ ನೇಮಕಾತಿಗಳಲ್ಲಿ ಶೇ.4 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.

ಹಿಂದುಳಿದ ವರ್ಗಗಳ ಇಲಾಖೆಯಿಂದ ಪ್ರವರ್ಗ 1 ರಲ್ಲಿನ ಜಾತಿಗಳ ಜನಾಂಗದವರಿಗೆ ವಿಶೇಷವಾಗಿ ವಿದ್ಯಾರ್ಥಿ ವೇತನ, ಆಶ್ರಮ ಶಾಲೆಗಳು, ಹೆಚ್ಚುವರಿ ಭೋಜನ ವೆಚ್ಚ ನೀಡಿಕೆ, ಬೆಳ್ಳಬೆಳಕು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ಅಲ್ಲದೆ ಇಲಾಖೆಯ ಇತರೆ ಕಾರ್ಯಕ್ರಮಗಳಲ್ಲೂ ಅಂದರೆ ವಿದ್ಯಾರ್ಥಿನಿಲಯಗಳು, ಹೊಲಿಗೆ ತರಬೇತಿ, ಕಾನೂನು ತರಬೇತಿ, ಶುಲ್ಕ ವಿನಾಯಿತಿ ಮುಂತಾದ ಕಾರ್ಯಕ್ರಮಗಳಲ್ಲಿಯೂ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದಲೂ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಅಲ್ಲದೆ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ನೀರಾವರಿ ಸೌಲಭ್ಯವನ್ನು ನೀಡಲಾಗುತ್ತಿದೆ.

ಅಲ್ಲದೆ ಇತ್ತೀಚೆಗೆ ಶ್ರಮಶಕ್ತಿ ಎಂಬ ಹೊಸ ಕಾರ್ಯಕ್ರಮವನ್ನು ರೂಪಿಸಿದ್ದು, 34 ವಿವಿಧ ಕುಶಲ ವೃತ್ತಿಗಳಲ್ಲಿ ಯಾವುದಾದರೂ ಒಂದು ವೃತ್ತಿಯಲ್ಲಿ ತೊಡಗಿರುವ ಹಿಂದುಳಿದ ವರ್ಗಗಳಿಗೆ ನೇರ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಉಪ್ಪಾರ ಅಥವಾ ಮೇಲು ಸಕ್ಕರೆ ಜಾತಿಗಳ ಜನಾಂಗದವರು ಈ ವೃತ್ತಿಗಳನ್ನು ಮಾಡುತ್ತಿದ್ದಲ್ಲಿ ಅವರುಗಳಿಗೂ ಈ ಸೌಲಭ್ಯವನ್ನು ಒದಗಿಸಲಾಗುವುದು.

ಉಪ್ಪಾರ/ಮೇಲುಸಕ್ಕರೆ ಈ ಜನಾಂಗದವರ ಸಾಮಾಜಿಕ, ಆರ್ಥಿಕ,ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಪರಿಶೀಲಿಸಿ, ಇವರ ಅಭಿವೃದ್ಧಿ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಉತ್ತರವನ್ನು ಕೊಟ್ಟಿದೆ. ಇದರಲ್ಲಿ ನಾನು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಈ ಜನಾಂಗ ಚಾಮರಾಜ ನಗರ ಮತ್ತು ಚಾಮರಾಜನಗರ ಜಿಲ್ಲೆ, ಮೈಸೂರು, ಚಿತ್ರದುರ್ಗ ಸೇರಿದಂತೆ ಇವರು ಇಡೀ ರಾಜ್ಯದಾದ್ಯಂತ, ಇರುವಂತಹ ಮುಗ್ಧ ಜನಾಂಗದವರಾಗಿದ್ದಾರೆ. ಬಹಳ ವರ್ಷಗಳ ಹಿಂದೆ ರಾಜಕೀಯವಾಗಿ ಈ ಜನಾಂಗದವರಿಗೆ ನಮ್ಮಲ್ಲಿ ಅವಕಾಶಗಳು ಇತ್ತು. ಹಿಂದೆ ಒಬ್ಬಬ್ಬರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಲೋಕಸೇವಾ ಆಯೋಗದ ಸದಸ್ಯರು ಆಗಿದ್ದರು. ಇವರು ನಿವೃತ್ತರಾದ ನಂತರ, ರಾಜಕೀಯವಾಗಿ ಈ ಜನಾಂಗದವರಿಗೆ ಯಾವುದೇ ಪ್ರವೇಶವಿಲ್ಲವಾಗಿದೆ. ನಾನು ಅತ್ಯಂತ ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಸರ್ಕಾರ ಈ ಜನಾಂಗಕ್ಕೆ ರಾಜಕೀಯವಾಗಿ, ಎಲ್ಲಾ ರೀತಿಯ ನೆರವನ್ನು ಕೊಡಬೇಕಾಗುತ್ತದೆ. ಈಗ ವಿಧಾನಪರಿಷತ್ತಿನಲ್ಲಿ ಮೂರು ನಾಮಕರಣ ಮಾಡುವಂಥಾದ್ದು ಏನು ಇದೆ, ಇದರಲ್ಲಿ ಒಂದು ಸ್ಥಾನವನ್ನು ಈ ಜನಾಂಗದವರಿಗೆ ಕೊಡಿ. ಈ ಜನಾಂಗದವರು ನಿಜಕ್ಕೂ ಕರಕುಶಲದಲ್ಲಿ, ಮುಂದುವರೆದಿರುವಂತಹ ಜನಾಂಗದವರಾಗಿದ್ದಾರೆ. ಈ ಜನಾಂಗದವರು ಹೆಂಚಿನ ಮನೆಗಳನ್ನೇ ನೋಡಿಲ್ಲ. ನನ್ನ ಪ್ರಕಾರ ಬಹುತೇಕ ಈ ಜನಾಂಗದವರು ಎಲ್ಲಿ ಬದುಕುತ್ತಿದ್ದರೂ, ಗುಡಿಸಲುಗಳಲ್ಲಿ ಇದ್ದಾರೆ. ಇವರು

ಬಹಳ ಒಳ್ಳೆಯ ಜನರಾಗಿದ್ದಾರೆ. ಈ ಜನಾಂಗದವರ ಉದ್ಧಾರಕ್ಕೆ, ಸಣ್ಣ ಸಣ್ಣ ಕೈಗಾರಿಕೆಗಳು, ಕರಕುಶಲ, ಗುಡಿಕೈಗಾರಿಕೆಗಳನ್ನು ಮಾಡತಕ್ಕಂಥ ಒಂದು ವ್ಯವಸ್ಥೆ ಆಗಬೇಕು ಮತ್ತು ಬೇರೆ ಹಿಂದುಳಿದ ವರ್ಗಕ್ಕೆ ಸೇರಿಸತಕ್ಕಂಥ, ಅನೇಕ ಕೋಮುಗಳಿಗೆ ಸೇರಿರುವಂತಹವರಿಗೆ ಏನೇನು ಅನುಕೂಲಗಳನ್ನು ಮಾಡಿದ್ದೀರಿ, ಆ ಅನುಕೂಲಗಳನ್ನು ಈ ಜನಾಂಗದವರಿಗೂ ಮಾಡಬೇಕು. ಇದರಲ್ಲಿ ಮೊದಲನೆಯದಾಗಿ ನೀವು ಮುಂದೆ ಮಾಡುವಂತಹ ಮಂಡಳಿಗಳು, ಅನೇಕ ಸಂಸ್ಥೆಗಳು, ಇವುಗಳಿಗೆ ನಾಮಕರಣವನ್ನು ಮಾಡುವಾಗ ಇವರನ್ನು ಹೆಚ್ಚಾಗಿ ಅಧ್ಯಕ್ಷರನ್ನಾಗಿ ಮಾಡುವಂಥಾದ್ದು, ಅತ್ಯಂತ ಪ್ರಾಮುಖ್ಯವಾಗಿದೆ. ಇನ್ನು ಈ ವಿಧಾನಪರಿಷತ್ತಿನ ಮೂರು ಸದಸ್ಯರುಗಳ ನಾಮಕರಣದಲ್ಲಿ ಒಂದು ನಾಮಕರಣವನ್ನು ಇವರಿಗೆ ಹಿಂದಿನಿಂದಲೂ ಕೊಡುತ್ತಿದ್ದಾರೆ, ಹಿಂದೆ ಕೊಳ್ಳೆಗಾಲದಲ್ಲಿ ಮಧುವನಹಳ್ಳಿ ಎನ್ನತಕ್ಕಂಥ ಸ್ಥಳದಲ್ಲಿ ಮಸಣಶೆಟ್ಟರು ಎಂದು ಇದ್ದರು. ಇವರು ನಿಮಗೂ ಜ್ಞಾಪಕದಲ್ಲಿ ಇರಬಹುದು. ಇದು ಆದಮೇಲೆ ನಮ್ಮ ಪಕ್ಕದ ಸ್ಥಳದಲ್ಲಿ ಜವರಾಯ ಶೆಟ್ಟಿ ಎಂದು ಇದ್ದರು. ಈ ಜನಾಂಗದಲ್ಲಿ ಇವರು ಹೋದ ಮೇಲೆ, ನಾವು ಯಾವುದೇ ರೀತಿಯ ಅವಕಾಶವನ್ನು ಕೊಟ್ಟಿಲ್ಲ. ಇದು ನಿಜಕ್ಕೂ ಎಲ್ಲಾ ಹಿಂದುಳಿದ ಜನಾಂಗಕ್ಕಿಂತಲೂ ಕಡಿಮೆ, ಮತ್ತು ನೋವಿನಲ್ಲಿ ಇರತಕ್ಕಂಥ ಜನಾಂಗವಾಗಿದೆ. ನಮಗೆ ಸ್ವಾತಂತ್ರ್ಯ ಬಂದು 56 ವರ್ಷಗಳಾದರೂ ಈ ಜನಾಂಗದವರು ಇನ್ನೂ ಬೆಳಕನ್ನು ಕಂಡಿಲ್ಲ. ಈ ಜನಾಂಗಕ್ಕೆ ಹೆಸರಿಗೆ ಮೇಲು ಸಕ್ಕರೆ ಎಂದು ಇದೆ. ಆದರೆ ಈ ಜನಾಂಗದವರು ನಿತ್ಯವೂ ಕಣ್ಣೀರಿನ ಕತೆಯಲ್ಲಿ ಇದ್ದಾರೆ. ಈ ಜನಾಂಗದ ಉದ್ಧಾರಕ್ಕೆ, ಈ ಜನಾಂಗದ ಬೆಳವಣಿಗೆಗೆ ವಿಶೇಷವಾದ ಆಯೋಗವನ್ನು ರಚಿಸಿ, ಈ ಜನಾಂಗದವರನ್ನು ಗುರುತಿಸಿ, ಇವರಿಗೆ ಏನೇನು ಅನುಕೂಲಗಳನ್ನು ಮಾಡಬೇಕು. ಅವುಗಳನ್ನು ಯಾವ ಯಾವ ರೀತಿಯಾಗಿ ಮಾಡಬೇಕೆಂಬ ಬಗ್ಗೆ, ಅದು ವಿದ್ಯೆಯಲ್ಲಿ, ಮೀಸಲಾತಿಯನ್ನು ಉದ್ಯೋಗದಲ್ಲಿ ಏನೇನು ಕೊಡಬೇಕು, ಏನು ಅನುಕೂಲಗಳನ್ನು ಮಾಡಬೇಕೆಂಬ ಬಗ್ಗೆ ನಾವೆಲ್ಲರೂ ಚಿಂತನೆಯನ್ನು ಮಾಡಬೇಕು. ನಾವೆಲ್ಲರೂ, ಸೇರಿ ತಾವು ಸೇರಿ ಒತ್ತಾಯವನ್ನು ಮಾಡಬೇಕು. ನಾನು ಮತ್ತೊಮ್ಮೆ ಇದನ್ನು ಹೇಳುತ್ತಿದ್ದೇನೆ. ಈಗ ಬರುವ ವಿಧಾನಪರಿಷತ್ತಿನಲ್ಲಿ ಮೂರು ನಾಮಕರಣವನ್ನು ಯಾರಾದರೂ ಆಗಲಿ, ಅದರಲ್ಲಿ ಒಂದು ನಾಮಕರಣವನ್ನು ಇವರಿಗೆ ಕೊಡಬೇಕು. ಇವರಲ್ಲೊಬ್ಬರು ಲೋಕಸೇವಾ ಆಯೋಗದಲ್ಲಿ ಇದ್ದರು. ಅವರು ನಿವೃತ್ತರಾದ ಮೇಲೆ, ಆ ಜನಾಂಗದವರು ಅಲ್ಲಿಗೆ ಬಂದಿಲ್ಲ. ಅವರು ಅಲ್ಲಿ ಬರುವಹಾಗೆ ಮಾಡಬೇಕು.

ರಾಜಕೀಯವಾಗಿ ಈ ಜನಾಂಗದವರು ಬೆಳೆಯುವಂಥಾದ್ದಕ್ಕೆ, ಮತ್ತು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವ್ಯಾವ ರೀತಿಯ ಅನುಕೂಲವನ್ನು ಮಾಡಬೇಕು, ಅದನ್ನು ಮಾಡಬೇಕಾದದ್ದು ಅತಿ ಮುಖ್ಯವಾಗಿದೆ. ನನ್ನ ತಾಲೂಕಿನಲ್ಲೇ ಸುಮಾರು 20 ಸಾವಿರ ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಅವರಿಗೆ ಹೆಂಚಿನ ಮನೆಗಳು ಇಲ್ಲ. ಇದಕ್ಕೆ ಬೆಂಕಿ ಬಿದ್ದರೆ ಇಡೀ ಗುಡಿಸಲುಗಳೇ ನಾಶವಾಗುತ್ತವೆ. ನಾನು ಹೇಳುವುದೇನೆಂದರೆ ಇದಕ್ಕೆ ಒಂದು ವಿಶೇಷವಾದಂಥ ಯೋಜನೆಯನ್ನು ಮಾಡಿ, ಮೊದಲು ಈ ತಾಲ್ಲೂಕಿನಲ್ಲಿ ಕನಿಷ್ಠ ಒಂದು ಹತ್ತು ಸಾವಿರ ಹೆಂಚಿನ ಮನೆಗಳನ್ನು ಕೊಟ್ಟು, ವರ್ಷ ವರ್ಷಗಳಲ್ಲಿ ಒಂದು ಪಂಚವಾರ್ಷಿಕ ಯೋಜನೆಯನ್ನು ಮಾಡಿ. ಈ ಜನಾಂಗದವರ ಉದ್ಧಾರಕ್ಕೆ ಅನುಕೂಲವನ್ನು ಮಾಡಿ ಕೊಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ತಮಗೆ ತಿಳಿಸುತ್ತಾ, ನಾನು ತಮ್ಮ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ : ಮಾನ್ಯ ಉಪಾಧ್ಯಕ್ಷರೆ, ಕಳೆದ ತಿಂಗಳು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ, ದೊಡ್ಡದಾಗಿ ಉಪ್ಪಾರರ ಸಮ್ಮೇಳನ ಆಯಿತು. ಆಗ ಮಾನ್ಯ ಮುಖ್ಯಮಂತ್ರಿಯವರು ಇದ್ದರು, ನಾನು ಅಲ್ಲಿ ಇದ್ದೆ. ಹಿಂದೆ ಲೋಕ ಸೇವಾ ಆಯೋಗದ ಮಾಜಿ ಸದಸ್ಯರು ನೀರಾವರಿಯವರು, ಅವರು ಉಪ್ಪಾರ ಸಂಘದ ಅಧ್ಯಕ್ಷರು, ಅವರೇ ಒಂದು ಮೆಮೊರ್ಯಾಂಡಮ್ ಅನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟರು. ಅದರಲ್ಲಿ ಈಗ ತಾವು ಹೇಳಿದಂತಹ ವಿಷಯಗಳೆಲ್ಲವನ್ನೂ ಹೇಳಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಆ ದಿವಸ ಇದನ್ನು ಪರಿಶೀಲನೆ ಮಾಡಿ ಸಹಾಯ ಮಾಡುತ್ತೇನೆಂದು ಹೇಳಿದ್ದಾರೆ. ಇವರಿಗೆ ತೊಂದರೆ ಇದೆ, ನನ್ನ ಚಳ್ಳಕೆರೆ ತಾಲ್ಲೂಕಿನಲ್ಲಿ ಉಪ್ಪಾರ ಜನಾಂಗದವರು ಬಹಳ ಜನ ಇದ್ದಾರೆ. ಇತ್ತೀಚೆಗೆ ಈ ಬೆಳ್ಳಿ ಬೆಳಕು ಸ್ಕೀಮ್‌ನಲ್ಲಿ ಸ್ವಲ್ಪ ಸವಲತ್ತುಗಳನ್ನು ಕೊಟ್ಟಿದ್ದೇವೆ. ಆ ದಿವಸ ಅವರು ಏನು ಮೆಮೊರ್ಯಾಂಡಮ್ ಅನ್ನು ಕೊಟ್ಟಿದ್ದಾರೆ. ಅವತ್ತು ನಾನೂ ಇದ್ದೆ, ಮಾನ್ಯ ಮುಖ್ಯಮಂತ್ತಿಯವರು ಭರವಸೆಯನ್ನು ಕೊಟ್ಟಿದ್ದಾರೆ. ಹಿಂದೆ ಮಸಣ ಶೆಟ್ಟಿಯವರನ್ನು ನಮ್ಮ ಕಾಲದಲ್ಲೇ ಮಾಡಿದ್ದು. ಅವರು ಆದ ಮೇಲೆ ಜವರಯ್ಯ ಎನ್ನುವವರು ವಿಧಾನ ಪರಿಷತ್ತಿಗೆ ಸದಸ್ಯರಾಗಿದ್ದರು. ಇವರು ಆದಮೇಲೆ ಯಾರೂ ಆಗಿಲ್ಲ. ಈ ಸಾರಿ ಉಪ್ಪಾರ ಜನಾಂಗದವರು ಯಾರೂ ಎಂ.ಎಲ್. ಎ. ಗಳು ಇಲ್ಲ. ಹಿಂದೆ ಸೂಂಡೂರಿನಿಂದ ಭೂಪತಿ ಎನ್ನುವವರು ಇದ್ದರು. ಆದರೆ ಈಗ ಯಾರೊಬ್ಬರು ಚುನಾಯಿತರಾಗಿ ಬಂದಿಲ್ಲ. ಉಪ್ಪಾರ ಜನಾಂಗದ ರಾಜ್ಯದ ಅಧ್ಯಕ್ಷರು ನೀರಾವರಿಯವರು

ಮೆಮೊರಾಂಡಮ್ ಅನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ, ಮತ್ತೆ ಭರವಸೆಯನ್ನು ಕೊಟ್ಟಿದ್ದಾರೆ. ನಾನು ಇಷ್ಟು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ರವರು ಪ್ರಸ್ತಾಪ ಮಾಡಿದಂತಹ ಉಪ್ಪಾರ ಜನಾಂಗದವರು ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಬಹಳ ಅತ್ಯಂತ ಹಿಂದುಳಿದ ಜನಾಂಗದವರಾಗಿದ್ದಾರೆ. ಅವರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಇವರು ಇತರೇ ಜನಾಂಗಕ್ಕಿಂತ ಉಪ್ಪಾರ ಜನಾಂಗದವರು ಅತ್ಯಂತ ಹಿಂದುಳಿದ ಜನಾಂಗದವರಾಗಿದ್ದಾರೆ. ಅವರಿಗೆ ಹೆಚ್ಚಿನ ರೀತಿಯಲ್ಲಿ ವಿಷೇಶವಾಗಿ ಪ್ಯಾಕೇಜ್ ಅನ್ನು ಸರ್ಕಾರ ಪ್ರಕಟಿಸಿ, ಅವರ ಅಭಿವೃದ್ಧಿಗೆ ಸಹಾಯ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಈ ಉಪ್ಪಾರ ಜನಾಂಗ ಸಾಕಷ್ಟು ಪ್ರಮಾಣದಲ್ಲಿ, ನನ್ನ ಕ್ಷೇತ್ರವಾದ ಶಿಕಾರಿಪುರದಲ್ಲೂ ಸಾಕಷ್ಟು ಜನರು ಇದ್ದಾರೆ. ಇವರು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಒಂದು ರೀತಿಯಲ್ಲಿ ತುಳಿತಕ್ಕೆ ಒಳಗಾಗಿರುವಂತಹ ಜನಾಂಗವಾಗಿದೆ. ನಮ್ಮಲ್ಲಿ ಬೇರೆ, ಬೇರೆ, ಯೋಜನೆಗಳು ಇವೆ, ಅದರಲ್ಲಿ ಏನಾದರೂ ಮಾಡುತ್ತೇವೆಂಬ, ಆ ಸಮೂಹಕ್ಕೆ ಅನುಕೂಲವನ್ನು ಮಾಡಿ ಕೊಡುತ್ತಿರೆಂಬ ಭರವಸೆಯಿಂದ ಇವತ್ತು ಪ್ರಸ್ತಾಪ ಮಾಡಿರುವಂತಹ, ಪ್ರಮುಖವಾದ ಪ್ರಶ್ನೆಗೆ ಶ್ರಮ ಶಕ್ತಿ ಎಂಬ ಯೋಜನೆಯ ಮೂಲಕ 34 ವಿವಿಧ ಕುಶಲ ವೃತ್ತಿಯಲ್ಲಿ ಯಾವುದೋ ಒಂದು ವೃತ್ತಿಯಲ್ಲಿ ತೊಡಗಿರುವಂತಹ ಹಿಂದುಳಿದ ವರ್ಗದವರಿಗೆ ನೇರ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಉಪ್ಪಾರ ಅಥವಾ ಮೇಲು ಸಕ್ಕರೆ ಜಾತಿಗಳ ಜನಾಂಗದವರು ಈ ವೃತ್ತಿಗಳನ್ನು ಮಾಡುತ್ತಿದ್ದಲ್ಲಿ ಅವರುಗಳಿಗೂ ಈ ಸೌಲಭ್ಯವನ್ನು ಒದಗಿಸಲಾಗುವುದು, ಎಂದು ತಾವು ಉತ್ತರದಲ್ಲಿ ತಿಳಿಸಿದ್ದೀರಿ. ನಾನು ಸಚಿವರಲ್ಲಿ ವಿನಂತಿ ಮಾಡುವಂತಹದ್ದು, ತಾವು ಬೇಕಾದರೆ ಉಪ್ಪಾರ ಜನಾಂಗದವರು ವಾಸಮಾಡುತ್ತಿರುವಂತಹ ಚಾಮರಾಜನಗರ, ಶಿವಮೊಗ್ಗ ಜಿಲ್ಲೆಗಳು ಸೇರಿ ಈ ರಾಜ್ಯದಲ್ಲಿ ಇವರು ಎಲ್ಲೆಲ್ಲಿ ವಾಸ ಮಾಡುತ್ತಾರೆ, ಅವರ ಜೀವನ ಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಳ್ಳುವಂತಹ ಪ್ರಯತ್ನವನ್ನು ಮಾಡಿ. ನಿಮಗೆ ನಾವು ಪ್ರಸ್ತಾಪ ಮಾಡಿರುವಂತಹ ಪ್ರಶ್ನೆ, ಅವರು ನಿಜವಾಗಿ ಆರ್ಥಿಕವಾಗಿ

ಹಿಂದುಳಿದಿರುವಂಥವರು. ಅವರಿಗೆ ಯಾವುದೇ ರೀತಿಯ ಸವಲತ್ತುಗಳು ಸಿಗದೇ, ಒಂದು ರೀತಿಯಲ್ಲಿ ತುಳಿತಕ್ಕೆ ಒಳಗಾಗಿರುವಂತಹ ಸಮೂಹದವರಾಗಿದ್ದಾರೆ. ಅವರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಡುವಂತಹ ಅಗತ್ಯತೆ ಇದೆಯೆಂಬ ಬಗ್ಗೆ ಮನವರಿಕೆಯಾದರೆ, ಆಗ ಅವರಿಗೆ ಒಂದು ವಿಶೇಷವಾದಂತಹ ಸವಲತ್ತು ಒದಗಿಸಿ, ಅವರು ಅವರ ಕಾಲ ಮೇಲೆ ನಿಲ್ಲುವಂತಹ ಒಂದು ವ್ಯವಸ್ಥೆಯಾಗಬೇಕೆಂಬ ದೃಷ್ಟಿಯಿಂದ, ಇವತ್ತು ಈ ಪ್ರಶ್ನೆಯನ್ನು ಎತ್ತಿರುವಂತಹ ಉದ್ದೇಶವಾಗಿದೆ. ತಾವು ಶ್ರಮ ಶಕ್ತಿ ಕಾರ್ಯಕ್ರಮದ ಮೂಲಕ ನಾವು ಎನೋ ಮಾಡುತ್ತೇವೆಂದು ಹೇಳದೆ ಇವರಿಗೆ ಏನಾದರೂ ವಿಶೇಷವಾದಂತಹ ಯೋಜನೆಯ ಮೂಲಕ, ಅವರನ್ನು ಸಬಲಗೊಳಿಸುವಂತಹ ಮತ್ತು ಅವರು ನೆಮ್ಮದಿಯಿಂದ ಬದುಕುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಏನಾದರೂ ಮಾಡಬೇಕು. ಇಲ್ಲಿ ನಿಮ್ಮ ಉತ್ತರದಿಂದ ತೃಪ್ತಿಯಾಗುವುದಿಲ್ಲ. ನೀವು ಬೇಕಾದರೆ ಬೇರೆ ರೀತಿಯಲ್ಲಿ ಯೋಚನೆಯನ್ನು ಮಾಡಿ, ಒಂದು ತೀರ್ಮಾನಕ್ಕೆ ಬಂದು, ಅವರ ನೆರವಿಗೆ ಬರಬೇಕೆಂಬ ಆಗ್ರಹವನ್ನು ನಾನು ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ನಾನು ಇದಕ್ಕೆ ಸಂಬಂಧಪಟ್ಟಹಾಗೆ ಉಪ್ಪಾರ ಜನಾಂಗ ಇಲ್ಲಿ ಸ್ವಲ್ಪ ಪರವಾಗಿಲ್ಲ. ನಮ್ಮ ಮಲೆನಾಡಿನಲ್ಲಿ ಕೂಡ ಇವರು ಇದ್ದಾರೆ. ಅವರು ಮನೆಗಳಲ್ಲೂ ಇರುವುದಿಲ್ಲ, ದೊಡ್ಡ ದೊಡ್ಡ ಮರಗಳ ನೆರಳಿನಲ್ಲಿ ವಾಸಮಾಡುವುದು. ಅವರಿಗೆ ಮನೆಯನ್ನು ಕಟ್ಟಿಸಿ ಕೊಟ್ಟರೂ, ಅವರು ಅದರಲ್ಲಿ ಇರುವುದಿಲ್ಲ. ಇಂತಹ ಪರಿಸ್ಥಿತಿ ಇದೆ. ಅವರಿಗೆ ಶೈಕ್ಷಣಿಕವಾಗಿ ಏನೂ ಇಲ್ಲ. ಈಗ ಬಲವಂತವಾಗಿ ಶಾಲೆಗೆ ಅವರ ಮಕ್ಕಳನ್ನು ಸೇರಿಸುವಂಥಾದ್ದು ಆಗಿದೆ. ಇವರು ಸರ್ವೆ ಕಾಲದಲ್ಲಿ ಏಕೆ ಸಿಗಲಿಲ್ಲವೆಂಬುದು ಗೊತ್ತಾಗಿಲ್ಲ. ನಮ್ಮಲ್ಲಿ ಇರುವಂಥ ಉಪ್ಪಾರ ಜನಾಂಗದವರು ದಕ್ಷಿಣ ಕನ್ನಡ ಮೂಲದವರು, ಇವರು ಸ್ವಲ್ಪ ತುಳು ಭಾಷೆಯನ್ನು ಮಾತನಾಡುತ್ತಾರೆ. ಇವರು ದಕ್ಷಿಣ ಕನ್ನಡದಲ್ಲಿ ಎಸ್.ಸಿ. ಗಳಾಗಿದ್ದಾರೆ. ಅವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ, ಆದರೆ ಇಲ್ಲಿ ಮೇಲುಗಡೆ ಅವರು ಪರಿಶಿಷ್ಟ ಜಾತಿಯಲ್ಲಿ ಇಲ್ಲ. ಹಾಗಾಗಿ ಮಾನ್ಯ ಸಚಿವರು, ಇವರ ಬಗ್ಗೆ ಏನಾದರೂಮಾಡಿ, ಇವರನ್ನು ಪರಿಶಿಷ್ಟ ಜಾತಿಯವರಿಗಿಂತ ಕೆಳಗಿನ ಜನಾಂಗದ ಹೆಸರು ಎಂದು ಕ್ಯಾಟಗರಿ ಮಾಡಿದರೆ, ನಮ್ಮಲ್ಲಿ ಇರುವಂತಹ ಮಲೆನಾಡಿನಲ್ಲಿರುವರು ಇದಕ್ಕೆ ಫಿಟ್ ಆಗುತ್ತಾರೆ. ಆದುದರಿಂದ ಅವರಿಗೆ ಮೂಲಭೂತ ಸೌಕರ್ಯಗಳನ್ನು

ಮಾಡಿ, ಅವರನ್ನು ಶೈಕ್ಷಣಿಕವಾಗಿ ಮೇಲೆತ್ತುವ ಬಗ್ಗೆ ಸರ್ಕಾರ ವಿಶೇಷವಾದ ಗಮನವನ್ನು ಕೊಡದೇ ಹೋದರೆ, ನಾವು ಈ ರೀತಿಯಾಗಿ ಅಧಿಕಾರದಲ್ಲಿದ್ದು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ, ನಾವು ಪಾಪಕ್ಕೆ ಒಳಗಾಗುತ್ತೇವೇನೋ ಎಂದು ಅನ್ನಿಸುತ್ತದೆ. ಆದುದರಿಂದ ದಯಮಾಡಿ ಇವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಂಜನಾಮೂರ್ತಿ(ವಸತಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಅರಗ ಜ್ಞಾನೇಂದ್ರ ರವರು ಏನು ಉಪ್ಪಾರ ಜನಾಂಗದವರ ಬಗ್ಗೆ ಹೇಳುತ್ತಿದ್ದಾರೆ, ಇವರು ಕೆಲವು ಕಡೆಗಳಲ್ಲಿ ಹಕ್ಕಿಪಿಕ್ಕಿಗಳೆಂದು ಇದ್ದಾರೆ. ಇವರು ಸಾಮಾನ್ಯವಾಗಿ ಊರುಗಳಲ್ಲಿ ಇರುವುದಿಲ್ಲ. ಇವರು "ಇದ್ದ ಊರಲ್ಲಿ ಇರುವವರು ಅಲ್ಲ, ಬಿದ್ದ ಗೋಡೆಯನ್ನು ಕಟ್ಟುವವರಲ್ಲ" ಆದರೂ ಇವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಎಲ್ಲಾ ವಿಧದಿಂದಲೂ ಹಿಂದುಳಿದವರಾಗಿರುವುದರಿಂದ, ಮಾನ್ಯ ಅರಗ ಜ್ಞಾನೇಂದ್ರರವರು ಕೊಟ್ಟಿರುವ ಸಲಹೆ, ಮತ್ತು ವಿರೋಧ ಪಕ್ಷದ ನಾಯಕರು ಆದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಕೊಟ್ಟಿರುವಂತಹ ಸಲಹೆ, ಉತ್ತಮವಾಗಿದೆ. ಇದರ ಬಗ್ಗೆ ಸರ್ಕಾರ ಸೂಕ್ತವಾಗಿ ಗಮನ ಹರಿಸುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು) : ಮಾನ್ಯ ಉಪಾಧ್ಯಕ್ಷರೇ, ನಮ್ಮಲ್ಲಿ ಆ ಜನಾಂಗದ ಒಂದು ಸಣ್ಣ ಮಟ್ಟದ ಸಮಾವೇಶವಾಯಿತು. ಅನೇಕ ಶಾಸಕರನ್ನು ಹಾಗೂ ಇನ್ನಿತರ ಗಣ್ಯರನ್ನು ಅಲ್ಲಿಗೆ ಆಮಂತ್ರಿಸಿದ್ದರು. ನಾವು ಆ ಕಾರ್ಯಕ್ರಮಕ್ಕೆ ಹೋದಾಗ, ಬಹುಶ: ನಮಗೆ ನೋವು ತರುವಂಥ ರೀತಿಯಲ್ಲಿ ಕಾರ್ಯಕ್ರಮದ ವೈಖರಿ ಇತ್ತು. ಚಾಟಿಯಿಂದ ತಮ್ಮನ್ನು ತಾವು ಹೊಡೆದುಕೊಂಡು ಅವರು ನಮ್ಮನ್ನು ಸ್ವಾಗತ ಮಾಡುತ್ತಿದ್ದರು. ಅಂದರೆ, ನಮ್ಮ ನೋವನ್ನು ತಾವು ಅರ್ಥ ಮಾಡಿಕೊಳ್ಳಿ ಎಂದು ಹೇಳುವ ರೀತಿಯಲ್ಲಿ ತಮ್ಮನ್ನು ತಾವು ಹೊಡೆದುಕೊಂಡು ಬಂದವರನ್ನು ಸ್ವಾಗತ ಮಾಡುತ್ತಿದ್ದರು. ಅಂದರೆ, ತಮಗೆ ಹೇಗೆ ನೋವಾಗಿದೆ ಎಂದು ಹೇಳುವಂಥಾದ್ದನ್ನು ಆ ರೀತಿಯಲ್ಲಿ ತೋರಿಸುತ್ತಿದ್ದರು. ದಯವಿಟ್ಟು, ಇದರ ಬಗ್ಗೆ ತಾವು ವಿಶೇಷ ಕಾಳಜಿಯನ್ನು ವಹಿಸಬೇಕು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪ್ಪಾರ ಜನಾಂಗದ ಹಾಗೆ 'ಕೊರಗ' ಜನಾಂಗ ಕೂಡ ಇದೆ. ಅವರು ತುಂಬಾ ದಯನೀಯ ಸ್ಥಿತಿಯಲ್ಲಿದ್ದಾರೆ. ಇದರ ಬಗ್ಗೆ ಸಾಕಷ್ಟು ಅಧ್ಯಯನ ವರದಿಗಳು ಬಂದಿವೆ. ಆದರೂ ಕೂಡ ಆ ಜನಾಂಗಕ್ಕೆ ಸರ್ಕಾರದ ಕಡೆಯಿಂದ ಯಾವುದೆ ರೀತಿಯ

ಸವಲತ್ತಾಗಲೀ, ಸಹಾಯವಾಗಲೀ ಸಿಗಲಿಲ್ಲ. ಅವರಿಗೆ ಸಂಬಂಧಪಟ್ಟ ಒಂದು ಹಾಸ್ಟೆಲ್ ಕೂಡ ಅರ್ಧದಲ್ಲಿ ನಿಂತಿದೆ. ಅದಕ್ಕೆ 23 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವತ್ತು ಒಬ್ಬನೇ ಒಬ್ಬ ವಿದ್ಯಾರ್ಥಿ ಅಲ್ಲಿ ವಾಸ ಮಾಡಲು ಯೋಗ್ಯವಲ್ಲದಂಥ ಕಟ್ಟಡ ಅದಾಗಿದೆ. ನಾನು ಸಮಾಜ ಕಲ್ಯಾಣ ಇಲಾಖಾ ಸಚಿವರಿಗೆ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ. ಅದನ್ನು ಕೆಡವಿ ಹೊಸ ಕಟ್ಟಡವನ್ನು ಕಟ್ಟಬೇಕಾಗಿದೆ. ಇಂಥ ದುಸ್ಥಿತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಕೂಡ ಆ ಜನಾಂಗದವರು ಇದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಎಸ್.ಬಾಲರಾಜ್(ಕೊಳ್ಳೇಗಾಲ) : ಮಾನ್ಯ ಉಪಾಧ್ಯಕ್ಷರೇ, ಉಪ್ಪಾರ ಜನಾಂಗ ಎಂದು ಏನು ಹೇಳುತ್ತಾರೆ, ಅದನ್ನು ನಮ್ಮ ಭಾಗದಲ್ಲಿ ಮೇಲು ಸಕ್ಕರೆ ಜನಾಂಗ ಎಂದು ಕರೆಯುತ್ತಾರೆ. ಮೇಲು ಸಕ್ಕರೆ ಎಂಬ ಹೆಸರು ಏಕೆ ಬಂದಿದೆ ಎಂದರೆ, ಹಿಂದೆ ಪಾರ್ವತಿ ಪರಮೇಶ್ವರರು ಜೊತೆಯಲ್ಲಿದ್ದಂಥ ಸಂದರ್ಭದಲ್ಲಿ, ಏನು ತಿಂದರೂ ರುಚಿ ಸಿಗಲಿಲ್ಲವೆಂದು ಏನಾದರೊಂದು ಪದಾರ್ಥ ಮಾಡಿಕೊಡಬೇಕೆಂದು ಪಾರ್ವತಿ ಪರಮೇಶ್ವರನನ್ನು ಕೇಳಿದಾಗ, ಪರಮೇಶ್ವರ ಮಾಡಿದ ಎಲ್ಲಾ ರುಚಿಗಳನ್ನು ನೋಡಿ ಯಾವ ರುಚಿಯೂ ತೃಪ್ತಿಯಾಗಲಿಲ್ಲವೆಂದು ಪಾರ್ವತಿ ಅಂದ ಮೇಲೆ, ಪರಮೇಶ್ವರ ಕೊನೆಗೆ ಒಬ್ಬ ಮನುಷ್ಯನನ್ನು ಸೃಷ್ಟಿ ಮಾಡಿ, ನೀನು ಏನಾದರೂ ರುಚಿಯಾದಂಥಾದ್ದು ತಯಾರು ಮಾಡು ಎಂದು ಹೇಳಿದನಂತೆ. ಆ ಮನುಷ್ಯ ತಯಾರು ಮಾಡಿದಂಥ ಉಪ್ಪು ಪಾರ್ವತಿಗೆ ರುಚಿಯಾಯಿತಂತೆ. ಆವತ್ತಿನಿಂದ, ಅವರನ್ನು ಉಪ್ಪಾರರು, ಅಂದರೆ ಉಪ್ಪನ್ನು ತಯಾರು ಮಾಡತಕ್ಕಂಥವರಿಗೆ ಉಪ್ಪಾರರು, ಉಪ್ಪಾರ ಜನಾಂಗ ಎಂದು ಹೆಸರಿಟ್ಟಿದ್ದಾರೆ. ಅದು ಸಕ್ಕರೆಗಿಂತಲೂ ರುಚಿಯಾಗಿರತಕ್ಕಂಥಾದ್ದು, ಹಾಗಾಗಿ ಅದನ್ನು ಮೇಲು ಸಕ್ಕರೆಯೆಂದೂ, ಅದನ್ನು ತಯಾರು ಮಾಡತಕ್ಕಂಥವರನ್ನು ಮೇಲು ಸಕ್ಕರೆ ಜನಾಂಗ ಎಂದು ಕರೆಯುತ್ತಾರೆ. ಅವರು ಬಹಳ ಹಿಂದುಳಿದಂಥವರು. ಮೊದಲಿನಿಂದಲೂ ಉಪ್ಪನ್ನು ತಯಾರು ಮಾಡಲು ಯಾವುದೇ ನಿರ್ದಿಷ್ಟ ಜಾಗಗಳಿಲ್ಲ. ಮೊದಲು ಚೌಳು-ಜೌಗು ಭೂಮಿಗಳಲ್ಲಿ ಉಪ್ಪನ್ನು ತಯಾರು ಮಾಡುತ್ತಿದ್ದರು. ಈಗ ಉಪ್ಪನ್ನು ತಯಾರು ಮಾಡುವುದಕ್ಕೆ ಸದಾವಕಾಶಗಳಿಲ್ಲ ಮತ್ತು ಕಾನೂನು ಹಾಗೂ ನೀತಿನಿಯಮಗಳು ವಿಪರೀತ ಇವೆ. ಹಾಗಾಗಿ, ಉಪ್ಪನ್ನು ತಯಾರು ಮಾಡಲು ಯಾವುದೇ ಅವಕಾಶಗಳು ಇಲ್ಲದಂಥ ಈ ಸಂದರ್ಭದಲ್ಲಿ, ಕುಲಕಸುಬು ಇಲ್ಲದಿರುವಂಥ ಈ ಕಾಲದಲ್ಲಿ ಅವರಿಗೆ ಏನಾದರೂ ಅನುಕೂಲ ಮಾಡಿಕೊಡಬೇಕು ಎನ್ನುವ

ದೃಷ್ಟಿಯಿಂದ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಸೂಕ್ತವಾದಂಥ ಸಹಾಯವನ್ನು ಪ್ಯಾಕೇಜ್ ನೀಡುವುದರ ಮುಖಾಂತರ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ : ನಾನು ಈಗಾಗಲೇ ಹೇಳಿದೆ, ಇತ್ತೀಚೆಗೆ ಅವರ ಜನಾಂಗದ ಒಂದು ದೊಡ್ಡ ಸ್ಟೇಟ್ ಲೆವೆಲ್ ಕಾನ್ಫರೆನ್ಸ್ ನಡೆಯಿತು. ಆವತ್ತು ಅಲ್ಲಿ ಮುಖ್ಯಮಂತ್ರಿಗಳೂ ಇದ್ದರು, ನಾನೂ ಇದ್ದೆ. ಆಗ, ಅವರ ಸ್ಟೇಟ್ ಲೆವೆಲ್ ಅಧ್ಯಕ್ಷರು, ಅವರ ಅನೇಕ ಬೇಡಿಕೆಗಳನ್ನೊಳಗೊಂಡ ಒಂದು ಮೆಮೊರಾಂಡಂ ಅನ್ನು ಕೊಟ್ಟಿದ್ದಾರೆ. ನಾನು ಅದನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಹೇಳುತ್ತೇನೆ. ಈಗಾಗಲೆ ಅವರಿಗೆ ಕೆಲವು ಅನುಕೂಲತೆಗಳನ್ನು ಕೊಟ್ಟಿದ್ದಾರೆ. ಅವರನ್ನು ಕರೆಸಿ, ಅವರು ಮೆಮೊರಾಂಡಂನಲ್ಲಿ ಏನೇನು ಬೇಡಿಕೆಗಳನ್ನಿಟ್ಟಿದ್ದಾರೆ ಅವುಗಳ ಬಗ್ಗೆ ಚರ್ಚೆ ಮಾಡಿ, ಅವರಿಗೆ ಇನ್ನೂ ಹೆಚ್ಚಿನ ಅನುಕೂಲತೆಗಳನ್ನು ಕೊಡಲು ಯೋಚನೆ ಮಾಡಿ, ಅವುಗಳನ್ನು ಮಾಡಿಕೊಡಿ ಎಂದು ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರದಿಂದ ನನಗೆ ಸಮಾಧಾನವಾಗಿಲ್ಲ. ಅವರು ಮನವಿ ಕೊಟ್ಟಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಬರಲಿ, ಅವರಿಗೆ ಹೇಳಿ ಮಾಡುತ್ತೇವೆ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರದ ನಿಲುವು ಹೀಗಿದೆ ಎಂದು ಅವರು ಸ್ಪಷ್ಟವಾಗಿ ಹೇಳಬೇಕು. ನಾನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ಅವರ ಜನಾಂಗಕ್ಕೆ ನಾವು ಮೊದಲಿನಿಂದ ನಾಮಕರಣ ಮಾಡುತ್ತಿದ್ದಂಥಾದ್ದನ್ನು ಕೈಬಿಟ್ಟಿದ್ದೇವೆ. ನಾವು ಈ ಸಾರಿ ಅವರಲ್ಲೊಬ್ಬರನ್ನು ನಾಮಕರಣ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಬೇಕು. ಲೋಕಸೇವಾ ಆಯೋಗಕ್ಕೆ ನಾಮಕರಣ ಮಾಡುತ್ತಿದ್ದೆವು, ಅದನ್ನು ಕೈಬಿಟ್ಟಿದ್ದೇವೆ, ಈಗ ಮಾಡುತ್ತೇವೆ ಎಂದು ಹೇಳಬೇಕು. ಇದ್ಯಾವುದನ್ನೂ ಉತ್ತರದಲ್ಲಿ ಹೇಳಲಿಲ್ಲ. ಈ ಜನಾಂಗದ ಬಗ್ಗೆ ಸಮಗ್ರ ಚಿಂತನೆ ಮಾಡುವುದಕ್ಕೆ ಒಂದು ಆಯೋಗವನ್ನು ರಚನೆ ಮಾಡಬೇಕು. ಅದರ ಬಗ್ಗೆಯೂ ಅವರು ಹೇಳಲಿಲ್ಲ. ಆದ್ದರಿಂದ, ಸರ್ಕಾರದ ಉತ್ತರ ನನಗೆ ತೃಪ್ತಿಯಾಗದೇ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಅತ್ಯಂತ ಬಹಳ ನೋವಿನ ಪ್ರಸಂಗ. ಇದರ ಬಗ್ಗೆ ಸರ್ಕಾರಕ್ಕೆ ಪ್ರಾಮಾಣಿಕವಾದಂಥ ಚಿಂತನೆ ಇಲ್ಲ; ಪ್ರಾಮಾಣಿಕವಾದಂಥ ಒಂದು ನೀತಿ ಇಲ್ಲ. ಇದರಿಂದ ನಿಜಕ್ಕೂ ನನಗೆ ನೋವಾಗುತ್ತಿದೆ. ಮಂಜುನಾಥ್‌ರವರು ನನಗೆ ಅತ್ಯಂತ ಆತ್ಮೀಯರು. ಹಿಂದೆ ಅವರು

ಉಪಾಧ್ಯಕ್ಷರಾಗಿ ತಮ್ಮ ಸ್ಥಳದಲ್ಲಿಯೇ ಕುಳಿತಿದ್ದರು. 1967 ರಲ್ಲಿ ನಾನು ಸದಸ್ಯನಾಗಿ ಇಲ್ಲಿದ್ದಾಗ, ಅವರು ಸುಮಾರು ಒಂದು ವರ್ಷ ಅಧ್ಯಕ್ಷರಾಗಿದ್ದರು. ವೈಕುಂಠ ಬಾಳಿಗಾರವರಿಗೆ ಅನಾರೋಗ್ಯವಾಗಿದ್ದಾಗ ಸುಮಾರು ಒಂದು ವರ್ಷ ಕಾಲ ಅಧ್ಯಕ್ಷರಾಗಿದ್ದರು. ಕೊಳ್ಳೇಗಾಲದ ಮಸಣ ಶೆಟ್ಟರನ್ನು ಅವರು ನೋಡಿದ್ದಾರೆ. ಈಗ ನನಗನ್ನಿಸುತ್ತಿದೆ, ಸರ್ಕಾರದ ನೀತಿ ಪ್ರಾಮಾಣಿಕವಾಗಿಲ್ಲ. ಅವರು ಸರ್ಕಾರಕ್ಕೆ ಮನವಿ ಕೊಟ್ಟರಲ್ಲಾ, ನೀವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ? ಇದುವರೆಗೆ ನೀವು ಏಕೆ ತೀರ್ಮಾನ ತೆಗೆದುಕೊಳ್ಳಲಿಲ್ಲ? ಆದ್ದರಿಂದ, ಸರ್ಕಾರದ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಆ ಜನಾಂಗದ ಬಗ್ಗೆ ನಿಮಗೆ ಪ್ರಾಮಾಣಿಕತೆಯಿಲ್ಲ.

ಶ್ರೀ ಎಂ.ಪಿ.ವೆಂಕಟೇಶ್ : ನಿಮ್ಮ ಮಾತನ್ನು ಮುಖ್ಯಮಂತ್ರಿಗಳು ಕೇಳುತ್ತಾರೆ. ನೀವೇಕೆ ವಾಕೌಟ್ ಮಾಡಬೇಕು? ನೀವು ಮುಖ್ಯಮಂತ್ರಿಗಳ ಮನವೊಲಿಸಿ. ನಿಮ್ಮ ಮಾತನ್ನು ಅವರು ಕೇಳುತ್ತಾರೆ. ಅದನ್ನು ಬಿಟ್ಟು ನೀವು ಮುಖ್ಯಮಂತ್ರಿಗಳು ಇಲ್ಲದಿದ್ದಾಗ ವಾಕೌಟ್ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನೀವು ಏನು ಹೇಳಿದರೂ ಆಗುವುದಿಲ್ಲ. ಗಾಣಗಿತ್ತಿ ಅಯ್ಯೋ ಎಂದರೆ ಮಗುವಿನ ತಲೆಯ ಮೇಲೆ ಎಣ್ಣೆ ಬರುವುದಿಲ್ಲ. ಮಗುವಿನ ತಲೆಗೆ ಎಣ್ಣೆ ಹಾಕುವವರೆಗೂ ನತ್ತಿ ತಣ್ಣಗಾಗುವುದಿಲ್ಲ. ಹಾಗಾಗಿ, ಬರೀ ಒಣ ಪ್ರಸಂಗದ ಮಾತುಗಳನ್ನು ಹೇಳಬೇಡಿ. ಇವರ ಬಗ್ಗೆ ಒಂದು ಪ್ರಾಮಾಣಿಕತೆ ಇಲ್ಲ ಎದ್ದು ಕಾಣುತ್ತಿಲ್ಲ. ಪ್ರಮಾಣಿಕತೆ ಬೇಕು. ನಿಮ್ಮ ಪ್ರಾಮಾಣಿಕತೆಯನ್ನೇ ನಾನು ನೇರವಾಗಿ ಪ್ರಶ್ನೆ ಮಾಡುತ್ತಿದ್ದೇನೆ. ಹೆಚ್ಚು ಮಳೆ ಬಂದರೆ ಅವರು ಉಳಿಯುವುದಕ್ಕಾಗುವುದಿಲ್ಲ. ಬೆಂಕಿ ಬಿದ್ದರೆ ಉಳಿಯುವುದಕ್ಕಾಗುವುದಿಲ್ಲ. ಮಳೆಯಲ್ಲಿ ನೆನೆಯುತ್ತಿದ್ದಾರೆ ಬೆಂಕಿ ಬಿದ್ದರೆ, ಆ ಗುಡಿಸಲುಗಳು ಉಳಿಯುವುದಿಲ್ಲ. ಈ ಪರಿಸ್ಥಿತಿ ಬಹಳ ವರ್ಷಗಳಿಂದ ಇದೆ. ಹಿಂದೆ, ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದಾಗಲೂ, ಅವರಿಗಾಗಿ ನೆರಳಿನ ಭಾಗ್ಯ ಎನ್ನುವ ಯೋಜನೆಯನ್ನು ಮಾಡಿ ಎಂದು ಹೇಳಿದ್ದೆ. ಈಗಲಾದರೂ ಆ ಜನಾಂಗಕ್ಕೆ ನೆರಳಿನ ಭಾಗ್ಯ ಎಂದು ಮಾಡಿ, ಈ ವರ್ಷ ಕನಿಷ್ಟ 10 ಸಾವಿರ ಮನೆಗಳನ್ನು ಅವರಿಗೆ ಕೊಡಿ. ಆ ಜನಾಂಗಕ್ಕೆ ನಾವು ಇಷ್ಟೂ ಕೊಡಲು ಆಗುವುದಿಲ್ಲವೆಂದರೆ, ಇದು ನಿಜಕ್ಕೂ ನನಗೆ ಬಹಳ ನೋವೆನಿಸುತ್ತದೆ. ಇದನ್ನು ಹೇಳಿ, ನಾನು ಅತ್ಯಂತ ನೋವಿನಿಂದ ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್ : ನಿಮ್ಮ ಮಾತನ್ನು ಮುಖ್ಯಮಂತ್ರಿಗಳು ಕೇಳುತ್ತಾರೆ, ನೀವೇಕೆ ಹೋಗುತ್ತಿದ್ದೀರಿ? ಇದು ಸರಿಯಿಲ್ಲ. ನೀವು ವಾಕೌಟ್ ಮಾಡಿದರೆ ಹೇಗೆ?

ಶ್ರೀ ಅಂಜನಮೂರ್ತಿ : ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು.....

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ವೆಂಕಟೇಶ್ : ಆ ಜನಾಂಗಕ್ಕೆ ತೊಂದರೆಯಾಗದ ರೀತಿ ನೀವು ಮುಖ್ಯಮಂತ್ರಿಗಳ ಮನವೊಲಿಸಿ.

ಶ್ರೀ ವಾಟಾಳ್ ನಾಗರಾಜ್ : ನೀವು ಸರ್ಕಾರದ ವಕ್ತಾರರೇ? ಆ ಜನಾಂಗದ ಪರಿಸ್ಥಿತಿ ಏನು ಎನ್ನುವುದು ನನಗೆ ಗೊತ್ತಿದೆ. ನನ್ನ ಕ್ಷೇತ್ರದಲ್ಲಿ ಅವರ ಪಾದಸೇವೆ ಮಾಡುತ್ತಿದ್ದೇವೆ ನಾವು. ಅವರ ಪರಿಸ್ಥಿತಿ ನನಗೆ ಗೊತ್ತಿದೆ.

ಉಪಾಧ್ಯಕ್ಷರು : ಅಂಜನಾಮೂರ್ತಿಯವರೇ, ಈ ಸಬ್ಜೆಕ್ಟ್ ನಿಮ್ಮದಲ್ಲ. ಇದು ಮಂಜುನಾಥ್‌ರವರು ಹೇಳಬೇಕಾಗಿರುವಂಥಾದ್ದು, ನೀವು ಕುಳಿತುಕೊಳ್ಳಿ.

ಶ್ರೀ ಅಂಜನಾಮೂರ್ತಿ : ನಮ್ಮ ಉತ್ತರವನ್ನು ಕೇಳುವಷ್ಟೂ ಸಂಯಮ ಇಲ್ಲವೆಂದರೆ, ವಾಟಾಳ್ ನಾಗರಾಜ್‌ರವರು ಸುಮ್ಮನೆ ಪ್ರಚಾರಕ್ಕೋಸ್ಕರ ಮಾತನಾಡುತ್ತಿದ್ದಾರೆ ಅಷ್ಟೇ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಸಭಾತ್ಯಾಗ ಮಾಡಿದರು)

ಡಾ: ಎಂ.ಸಿ.ಸುಧಾಕರ : ಮಾನ್ಯ ಉಪಾಧ್ಯಕ್ಷರೇ, ವಾಕೌಟ್ ಮಾಡುವವರು ಮಾಡಲಿ ಬಿಡಿ.

ಶ್ರೀ ಅಂಜನಾಮೂರ್ತಿ : ಅವರು ಕೇವಲ ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ, ಅವರಿಗೆ ಆ ಜನಾಂಗದವರ ಬಗ್ಗೆ ನಿಜವಾಗಿ ಕಾಳಜಿ ಇಲ್ಲ ಎಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ಆಯಿತಲ್ಲಾ ಬಿಡಿ. ಈಗ ಮುಂದಕ್ಕೆ ಹೋಗೋಣ. ಈಗ ಎ.ಟಿ.ರಾಮಸ್ವಾಮಿಯವರು.

(ಆ) ವಿಷಯ: ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರವೇಶಾವಕಾಶವನ್ನು ವ್ಯಾಪಾರೀಕರಣ ಗೊಳಿಸಿರುವುದರಿಂದ, ಅರ್ಹ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.